2017 ಕ.ತೀ.ವ. 302

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ನಾರಾಯಣ್ ನಾಗಪ್ಪ ನಾಯಕ್ (ಮೃತ) ಅವರ ಕಾನೂನು ಸಮ್ಮತ ವಾರಸುದಾರರು –ವಿರುದ್ಧ– ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಮತ್ತು ಇತರರು*

ಅರ್ಜಿದಾರರು, ರಿಟ್ ಅರ್ಜಿಯಲ್ಲಿರುವಂತೆ ಅನುಬಂಧ–ಎಫ್ ನ ಮೂಲಕ ಸಂ.ಎಲ್.ಆರ್.ಎಂ.ಎಸ್.ಆರ್. 18/903ರಲ್ಲಿ 2ನೇ ಪ್ರತ್ಯರ್ಜಿದಾರ/ಭೂ ನ್ಯಾಯಾಧಿಕರಣ ಮಾಡಿದ ಆದೇಶವನ್ನು ರದ್ದುಪಡಿಸಲು ರಿಟ್ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಲೇಟ್ ಕೃಷ್ಣಪ್ಪ ನಾಗಪ್ಪ ನಾಯಕ 1ನೇ ಅರ್ಜಿದಾರರ ಪತಿ ಮತ್ತು 2 ರಿಂದ 4ನೇ ಅರ್ಜಿದಾರರ ತಂದೆ, ಭೂ ನ್ಯಾಯಾಧಿಕರಣದ ಮುಂದೆ ಸರ್ವೇ ನಂ.83ರ 17 ಗುಂಟೆಗಳು 4 ಅನಾಸ್‌ಗೆ ಸಂಬಂಧಪಟ್ಟಂತೆ ಅಧಿಭೋಗ ಹಕ್ಕುಗಳನ್ನು ಕ್ಲೇಮು ಮಾಡಲು ನಮೂನೆ ಸಂ.7ನ್ನು ದಾಖಲು ಮಾಡಿದ್ದರು.

ಸರ್ವೇ ನಂಬರ್ ಸರಿಪಡಿಸುವಿಕೆ ಅಥವಾ ವಿಸ್ತೀರ್ಣ ಅಥವಾ ಹೊಸ ಸರ್ವೇ ನಂಬರ್ ಸೇರ್ಪಡಿಸುವಿಕೆಗೆ ತಿದ್ದುಪಡಿಗಾಗಿ ಯಾವುದೇ ಅರ್ಜಿಯನ್ನು ದಿನಾಂಕ 30.06.1979ರೊಳಗೆ ದಾಖಲು ಮಾಡಬಹುದು. ಒಪ್ಪಿತವಾದಂತೆ ಪ್ರಸ್ತುತ ಅರ್ಜಿಯನ್ನು ವಿಧಾನ ಮಂಡಲದಿಂದ ನಿರ್ದಿಷ್ಟಪಡಿಸಲಾದ ಕಾಲ ಪರಿಮಿತಿಯನ್ನು ಮೀರಿ ದಿನಾಂಕ 22.2.2003ರಂದು ವಿಸ್ತೀರ್ಣದ ತಿದ್ದುಪಡಿಗಾಗಿ ಸಲ್ಲಿಸಲಾಗಿರುವುದರಿಂದ ಇದು ಊರ್ಜಿತ ಯೋಗ್ಯವಾಗುವುದಿಲ್ಲವೆಂದು ಅಭಿಪ್ರಾಯಪಟ್ಟು ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.

* ರಿಟ್ ಅರ್ಜಿ ಸಂಖ್ಯೆ.: 112519/2014, (ಎಲ್‌ಆರ್) ದಿನಾಂಕ: 04ನೇ ಫೆಬ್ರವರಿ, 2016.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

1. *1989 (3) ಕೆಎಆರ್ ಎಲ್.ಜೆ.440*
*ಆರ್. ಕೃಷ್ಣಸ್ವಾಮಿ ರಾವ್ –ವಿರುದ್ಧ–*
*ಲಕ್ಷ್ಮಯ್ಯಶೆಟ್ಟಿ ಮತ್ತು ಇತರರು* *(ಉಲ್ಲೇ) 14*

2. *2002(6) ಕೆಎಆರ್ ಎಲ್.ಜೆ. 178*
*ಚೆನ್ನಪ್ಪಗೌಡ ಮತ್ತು ಇತರರು –ವಿರುದ್ಧ–*
*ಕರ್ನಾಟಕ ಸರ್ಕಾರ ಮತ್ತು ಇತರರು* *(ಉಲ್ಲೇ) 15*

ಅರ್ಜಿದಾರರ ಪರ : ಶ್ರೀ ನಾರಾಯಣ ವಿ. ಯಾಜಿ, ವಕೀಲರು ಇವರ ಪರ
ಎಸ್.ವಿ. ಯಾಜಿ, ವಕೀಲರು ;
1 ಮತ್ತು 2ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಕೆ. ವಿದ್ಯಾವತಿ, ಎಜಿಎ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ :**

ಅರ್ಜಿದಾರರು, ರಿಟ್ ಅರ್ಜಿಯಲ್ಲಿರುವಂತೆ ಅನುಬಂಧ–ಎಫ್ ನ ಮೂಲಕ ಸಂ.ಎಲ್ಆರ್ಎಂ–ಎಸ್ಆರ್–18/903ರಲ್ಲಿ 2ನೇ ಪ್ರತ್ಯರ್ಜಿದಾರ/ಭೂ ನ್ಯಾಯಾಧಿಕರಣ ಮಾಡಿದ ಆದೇಶವನ್ನು ರದ್ದುಪಡಿಸಲು ರಿಟ್ ಸರ್ಷಿಯೋರರಿಗಾಗಿ ಮತ್ತು ಅನುಬಂಧ–ಸಿ ಯಲ್ಲಿರುವಂತೆ ದಿನಾಂಕ 22.2.2003ರಂದು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 6, 17ನೇ ನಿಯಮದ ಅಡಿಯಲ್ಲಿ ಅರ್ಜಿದಾರನಿಂದ ದಾಖಲು ಮಾಡಿದ ಅರ್ಜಿಯನ್ನು ಅಂಗೀಕರಿಸುವಂತೆ 2ನೇ ಪ್ರತ್ಯರ್ಜಿದಾರರಿಗೆ ನಿರ್ದೇಶಿಸುವಂತೆ ಕೋರಿ ಈ ರಿಟ್ ಅರ್ಜಿಯನ್ನು ದಾಖಲು ಮಾಡಿದ್ದಾರೆ.

2. ಲೇಟ್ ಕೃಷ್ಣಪ್ಪ ನಾಗಪ್ಪ ನಾಯಕ/1ನೇ ಅರ್ಜಿದಾರರ ಪತಿ ಮತ್ತು 2 ರಿಂದ 4ನೇ ಅರ್ಜಿದಾರರ ತಂದೆ, ಭೂ ನ್ಯಾಯಾಧಿಕರಣದ ಮುಂಚೆ ಭಟ್ಕಳ ತಾಲ್ಲೂಕಿನಲ್ಲಿರುವ ಸುಸಗದ್ದಿ ಗ್ರಾಮದ ಸರ್ವೇ ನಂ.83ರ 17 ಗುಂಟೆಗಳು 4 ಅನಾಸ್‌ಗೆ ಸಂಬಂಧಪಟ್ಟಂತೆ ಅಧಿಭೋಗ ಹಕ್ಕುಗಳನ್ನು ಕ್ಲೇಮು ಮಾಡಲು ನಮೂನೆ ಸಂ.7ನ್ನು ದಾಖಲು ಮಾಡಿದ್ದರು. ನಾರಾಯಣ ನಾಗಪ್ಪ ನಾಯಕ ಮರಣದ ತರುವಾಯ, ಅರ್ಜಿದಾರನ ಕಾನೂನು ವಾರಸುದಾರರು ದಾಖಲೆಗಳ ಮೇಲೆ ಮುಂದುವರೆದಿದ್ದಾರೆ. ಸದರಿ ಕೃಷ್ಣಪ್ಪ ನಾಗಪ್ಪ ನಾಯಕನು ತನ್ನ ಜೀವಿತಾವಧಿಯಲ್ಲಿ, ಸದರಿ ಭೂಮಿಯ ಸಂಬಂಧದಲ್ಲಿ ಅಧಿಭೋಗ ಹಕ್ಕುಗಳ ಕ್ಲೇಮಿಗಾಗಿ ದಿನಾಂಕ 26.08.1978ರಂದು ನಮೂನೆ ಸಂಖ್ಯೆ 7 ರಲ್ಲಿ ಅರ್ಜಿಯನ್ನು ಸಲ್ಲಿಸಿದ್ದರು. ಭಟ್ಕಳದಲ್ಲಿನ ಭೂ ನ್ಯಾಯಾಧಿಕರಣದ ಆದೇಶ ದಿನಾಂಕ 21.09.1981ರ ಮೂಲಕ ಗೇಣಿದಾರನ ಕ್ಲೇಮನ್ನು ತಿರಸ್ಕರಿಸಿತ್ತು.

3. ಸದರಿ ಆದೇಶದಿಂದ ಬಾಧಿತನಾಗಿ ಸದರಿ ಮೂಲ ಗೇಣಿದಾರ ಕೃಷ್ಣಪ್ಪ ನಾಗಪ್ಪ ನಾಯಕ, ಈ ನ್ಯಾಯಾಲಯದ ಮುಂದೆ ರಿಟ್ ಅರ್ಜಿ ಸಂಖ್ಯೆ 20501/1993ನ್ನು ದಾಖಲು ಮಾಡಿದ್ದನು. ಉಭಯ ಪಕ್ಷಕಾರರ ಸುನಾವಣೆಯ ತರುವಾಯ ಈ ನ್ಯಾಯಾಲಯವು ದಿನಾಂಕ 25.07.2002ರ ಆದೇಶದ ಮೂಲಕ ಈ ರಿಟ್ ಅರ್ಜಿಯನ್ನು ಅಂಗೀಕರಿಸಿತ್ತು ಮತ್ತು ಭೂ ನ್ಯಾಯಾಧಿಕರಣದ ಆದೇಶವನ್ನು ರದ್ದುಪಡಿಸಿತ್ತು ಮತ್ತು ಈ ದಾವೆಯ ಎಲ್ಲಾ ಪಕ್ಷಕಾರರಿಗೆ ಅವಕಾಶವನ್ನು ನೀಡಿದ ತರುವಾಯ, ಕಾನೂನು ಅನುಸಾರವಾಗಿ ಹೊಸದಾಗಿ ಪರಿಗಣನೆಗಾಗಿ ಆ ವಿಷಯವನ್ನು ವಾಪಸ್ಸು ಕಳಿಸಲಾಗಿತ್ತು.

4. ಈ ಮಧ್ಯದಲ್ಲಿ, ಭೂ ಮಾಲೀಕನು, ಪ್ರಶ್ನಿತ ಆ ಭೂಮಿಯ ಸ್ವಾಧೀನ ಕೋರಿ ಮೂ.ದಾ.ಸಂ.38/1957ನ್ನು ದಾಖಲು ಮಾಡಿದ್ದಾನೆ. ಆದಾಗ್ಯೂ, ಆ ದಾವೆಯನ್ನು ವಜಾಗೊಳಿಸಲಾಗಿರುತ್ತದೆ. ತದನಂತರ ಭೂ ನ್ಯಾಯಾಧಿಕರಣದ ಮುಂದೆ ಆ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಮೂಲ ಗೇಣಿದಾರ

ನಾರಾಯಣ ನಾಗಪ್ಪ ನಾಯಕ್, ದಿನಾಂಕ 26.8.1978ರಂದು ದಾಖಲು ಮಾಡಿದ ನಮೂನೆ ಸಂ.7 ರಲ್ಲಿ ವಿಸ್ತೀರ್ಣ ಎನ್ನುವ ಅಂಕಣದಲ್ಲಿ 5 ಗುಂಟೆಗಳ ಬದಲಾಗಿ 16 ಗುಂಟೆಗಳೆಂದು ತಿದ್ದುಪಡಿ ಮಾಡಬೇಕೆಂದು ನ್ಯಾಯಾಧಿಕರಣದ ಮುಂದೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣವನ್ನು ಓದಲಾದಂತೆ ಕ್ರಮಾದೇಶ 6, 17ನೇ ನಿಯಮದ ಅಡಿಯಲ್ಲಿ ದಿನಾಂಕ 22.2.2003 ಅರ್ಜಿಯನ್ನು ದಾಖಲು ಮಾಡಿದ್ದು, ಸದರಿ ಅರ್ಜಿ ಭೂ ಮಾಲೀಕರಿಂದ ಪ್ರತಿರೋಧಿಸಲಾಗಿದೆ.

5. ಭೂ ನ್ಯಾಯಾಧಿಕರಣ ಉಭಯ ಪಕ್ಷಕಾರರ ಅಹವಾಲನ್ನು ಆಲಿಸಿದ ತರುವಾಯ ಅದರ ಪ್ರಶ್ನಿತ ಆದೇಶ ದಿನಾಂಕ 23.1.2013ರ ಮೂಲಕ ಮೂಲ ಅರ್ಜಿಯಲ್ಲಿರುವುದಕ್ಕಿಂತ ತಿದ್ದುಪಡಿ ಅರ್ಜಿಯನ್ನು ಕ್ಲೇಮು ಮಾಡಿರುವಷ್ಟು ಹೆಚ್ಚಿನ ವಿಸ್ತೀರ್ಣವನ್ನು ಅನುಮತಿಸಲಾಗದೆಂದು ಅಭಿಪ್ರಾಯಪಟ್ಟು ಈ ಅರ್ಜಿಯನ್ನು ತಿರಸ್ಕರಿಸಿದೆ. ಸದರಿ ಆದೇಶದ ವಿರುದ್ಧ, ಪ್ರಸ್ತುತ ರಿಟ್ ಅರ್ಜಿಯನ್ನು ದಾಖಲು ಮಾಡಲಾಗಿದೆ.

6. ಈ ದಾವೆಯ ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ನಾನು ಆಲಿಸಿದ್ದೇನೆ.

7. ತಿದ್ದುಪಡಿ ಅರ್ಜಿಯನ್ನು ತಿರಸ್ಕರಿಸಿ ಭೂ ನ್ಯಾಯಾಧಿಕರಣ ಮಾಡಿದ ಪ್ರಶ್ನಿತ ಆದೇಶವು, ಕಾನೂನಿಗೆ ವಿರುದ್ಧವಾಗಿದೆ ಮತ್ತು ಆತನು, ನಮೂನೆ ಸಂಖ್ಯೆ 7ರ ತಿದ್ದುಪಡಿಗೆ ಕೋರಿರಲಿಲ್ಲವೆಂಬುದನ್ನು ಗಮನಿಸುವುದಕ್ಕೆ ನ್ಯಾಯಾಧಿಕರಣ ವಿಫಲವಾಗಿದೆಯೆಂದು ಶ್ರೀ ನಾರಾಯಣ ವಿ. ಯಾಜಿ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಎಸ್.ವಿ. ಯಾಜಿ ವಾದಿಸಿದ್ದಾರೆ. ಕಾರಣಗಳನ್ನು ನೀಡುವ ಮೂಲಕ ಆತನು ವಿಸ್ತೀರ್ಣದ ಬದಲಾವಣೆಗೆ ತಿದ್ದುಪಡಿಗೆ ಆತನು ಇಚ್ಛಿಸಿದ್ದಾನೆಯೇ ಹೊರತು ಯಾವುದೇ ಸರ್ವೇ ನಂಬರ್ ಬದಲಾವಣೆಗಾಗಿ ಕೋರಿರುವುದಿಲ್ಲ. ಆದ್ದರಿಂದ, ನ್ಯಾಯಾಧಿಕರಣ, ತಿದ್ದುಪಡಿ ಅರ್ಜಿಯನ್ನು

ಅಂಗೀಕರಿಸಲೇಬೇಕಾಗಿದೆ. ಆದ್ದರಿಂದ, ಆತನು, ರಿಟ್ ಅರ್ಜಿಯನ್ನು ಅಂಗೀಕರಿಸುವುದರ ಮೂಲಕ ಪ್ರಶ್ನಿತ ಆದೇಶವನ್ನು ರದ್ದುಪಡಿಸಲು ಕೋರಿದ್ದಾರೆ.

8. ಇದಕ್ಕೆ ವಿರುದ್ಧವಾಗಿ 1 ಮತ್ತು 2ನೇ ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ಎಜಿಎ ಶ್ರೀಮತಿ ಕೆ. ವಿದ್ಯಾವತಿಯವರು ದಿನಾಂಕ 30.06.1979ರಂದು ಮೂಲ ಅರ್ಜಿ ನಮೂನೆ ಸಂಖ್ಯೆ 7ನ್ನು ದಾಖಲು ಮಾಡಲು ದಿನಾಂಕವನ್ನು ನಿಗದಿಪಡಿಸಿದ್ದು, ಮೂಲ ಅರ್ಜಿಯನ್ನು ನಂತರ ವಿಸ್ತೀರ್ಣ ದಷ್ಟರಮಟ್ಟಿಗೆ ತಿದ್ದುಪಡಿಗಾಗಿ ದಿನಾಂಕ 22.02.2003ರಂದು ಸಲ್ಲಿಸಲಾದ ಪ್ರಸ್ತುತ ಅರ್ಜಿಯನ್ನು ಅನುಮತಿಸಲಾಗದು ಎಂದು ವಾದಿಸಿದ್ದಾರೆ. ***ಚೆನ್ನಪ್ಪಗೌಡ ಮತ್ತು ಇತರರು*** ಪ್ರಕರಣದಲ್ಲಿ ಈ ನ್ಯಾಯಾಲಯದ ನಿರ್ದೇಶನದ ಹಿನ್ನೆಲೆಯಲ್ಲಿ ಮೂಲ ಅರ್ಜಿಯನ್ನು ತಿದ್ದುಪಡಿ ಮಾಡಲು ಭೂಮಿಯ ಸೇರ್ಪಡೆಗಾಗಿ ಹೊಸ ಅರ್ಜಿಯನ್ನು ಸಹ ಅಂಗೀಕರಿಸಲಾಗದು. ಆದ್ದರಿಂದ, ಆಕೆಯು ರಿಟ್ ಅರ್ಜಿಯನ್ನು ವಜಾಗೊಳಿಸುವುದಕ್ಕಾಗಿ ಕೋರಿದ್ದಾರೆ.

9. ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಗಳನ್ನು ತೀವ್ರ ಕಾಳಜಿ ವಹಿಸಿ ನಾನು ಪರಿಗಣಿಸಿದ್ದೇನೆ ಮತ್ತು ದಾಖಲೆ ಮೇಲಿನ ಇಡೀ ಸಾಮಗ್ರಿಯನ್ನು ಪರಿಶೀಲಿಸಲಾಗಿದೆ.

10. ಸುಸಗದ್ದಿ ಗ್ರಾಮ, ಭಟ್ಕಳ ತಾಲ್ಲೂಕಿನ ಸರ್ವೇ ನಂ.83ರ ಸಂಬಂಧದಲ್ಲಿ 3ನೇ ಪ್ರತ್ಯರ್ಜಿದಾರನ ಅಡಿಯಲ್ಲಿದ್ದ 17.4 ಗುಂಟೆಗಳ ಪೈಕಿ 5 ಗುಂಟೆ ವಿಸ್ತೀರ್ಣದಷ್ಟು ಭೂಮಿಗೆ ಈ ಹಿಂದೆ ಅಧಿಭೋಗ ಹಕ್ಕುಗಳನ್ನು ದಿನಾಂಕ 26.08.1978ರಂದು ಅರ್ಜಿದಾರನು ನಮೂನೆ ಸಂ.7ನ್ನು ದಾಖಲು ಮಾಡಿದ್ದಾನೆಂಬುದನ್ನು ಒಪ್ಪಿಕೊಳ್ಳಲಾಗಿದೆ ಮತ್ತು ದಾಖಲೆ ಮೇಲಿನ ಇಡೀ ಸಾಮಗ್ರಿಯನ್ನು ಪರಿಗಣಿಸಿದ ನ್ಯಾಯಾಧಿಕರಣವು, ತನ್ನ ಆದೇಶ ದಿನಾಂಕ 21.01.1981ರ ಮೂಲಕ ದಿನಾಂಕ 01.03.1974ರಲ್ಲಿದ್ದಂತೆ ತನ್ನ ಗೇಣಿದಾರಿಕೆಯನ್ನು ರುಜುವಾತುಪಡಿಸಲು ಗೇಣಿದಾರನು ವಿಫಲನಾಗಿದ್ದಾನೆಂದು

ಅಭಿಪ್ರಾಯಪಟ್ಟು ಆತನ ಅರ್ಜಿಯನ್ನು ತಿರಸ್ಕರಿಸಲಾಗಿದೆಯೆಂಬುದು ಸಹ ವಿವಾದಿತವಾಗಿರುವುದಿಲ್ಲ. ಸದರಿ ಆದೇಶವು, ರಿಟ್ ಅರ್ಜಿ ಸಂಖ್ಯೆ 20501/ 1993ರಲ್ಲಿ ಈ ನ್ಯಾಯಾಲಯದ ಮುಂದಿನ ವಿಷಯಕ್ಕೊಳಪಟ್ಟಿದೆ ಮತ್ತು ಈ ನ್ಯಾಯಾಲಯ, ಆದೇಶ ದಿನಾಂಕ 23.07.2002ರ ಮೂಲಕ ಉಭಯ ಪಕ್ಷಕಾರರ ಸುನಾವಣೆಯ ತರುವಾಯ ರಿಟ್ ಅರ್ಜಿಯನ್ನು ಅಂಗೀಕರಿಸಿದೆ ಮತ್ತು ಪ್ರಶ್ನಿತ ಆದೇಶವನ್ನು ಮಾಡುವ ಮುಂಚೆ ಪಕ್ಷಕಾರರಿಗೆ ಅವಕಾಶ ನೀಡಿಲ್ಲವೆಂಬ ಕಾರಣದ ಮೇಲೆ ಹೊಸದಾಗಿ ಪರಿಗಣನೆಗಾಗಿ ನ್ಯಾಯಾಧಿಕರಣಕ್ಕೆ ಆ ವಿಷಯವನ್ನು ವಾಪಸ್ಸು ಕಳುಹಿಸಲಾಗಿದೆ.

11. ಅರ್ಜಿದಾರರ ತಂದೆ ದಿನಾಂಕ 26.8.1978ರಷ್ಟು ಹಿಂದೆಯೇ ಅರ್ಜಿಯನ್ನು ದಾಖಲು ಮಾಡಲಾಗಿದ್ದರೂ ಮತ್ತು ದಿನಾಂಕ 21.01.1981ರಂದು ಭೂ ನ್ಯಾಯಾಧೀಕರಣದ ಮೂಲಕ ಅಧಿಬೋಗ ಹಕ್ಕುಗಳಿಗಾಗಿ ತನ್ನ ಕ್ಲೇಮನ್ನು ತಿರಸ್ಕರಿಸಿದ ತರುವಾಯ ಸಹ, ಆತನು, ನ್ಯಾಯಾಧಿಕರಣದ ಮುಂದೆ ಆ ಭೂಮಿಯ ಹೆಚ್ಚಿನ ವಿಸ್ತೀರ್ಣದ ತಿದ್ದುಪಡಿಗಾಗಿ ಅರ್ಜಿಯನ್ನು ದಾಖಲು ಮಾಡಿರುವುದಿಲ್ಲ. ದಿನಾಂಕ 23.7.2002ರಂದು ಈ ನ್ಯಾಯಾಲಯ ಮಾಡಿದ ಆದೇಶದ ತರುವಾಯ ಹೊಸ ಪರಿಗಣನೆಗಾಗಿ ಆ ವಿಷಯವನ್ನು ವಾಪಸ್ಸು ಕಳುಹಿಸಲಾಗಿದೆ. ದಿನಾಂಕ 22.2.2003ರಂದು ಪ್ರಸ್ತುತ ಅರ್ಜಿಯನ್ನು ಆತನು ದಾಖಲು ಮಾಡಿದ್ದು, ದಿನಾಂಕ 26.8.1978ರಂದು ದಾಖಲು ಮಾಡಿದ ನಮೂನೆ ಸಂ.7ರಲ್ಲಿ 5 ಗುಂಟೆಗಳ ಬದಲಾಗಿ 16 ಗುಂಟೆಗಳಂತೆ ಅಂಕಣ ಸಂ.5 ರಲ್ಲಿ ಹೆಚ್ಚಿನ ವಿಸ್ತೀರ್ಣದ ಭೂಮಿಯ ತಿದ್ದುಪಡಿ ಅರ್ಜಿಯನ್ನು ಸಲ್ಲಿಸಿದ್ದಾನೆ. ನ್ಯಾಯಾಧಿಕರಣವು ಪಕ್ಷಕಾರರ ಆ ಅರ್ಜಿಯನ್ನು ಮತ್ತು ಆಕ್ಷೇಪಣೆಗಳನ್ನು ಪರಿಗಣಿಸಿದೆ ಹಾಗೂ ಅರ್ಜಿದಾರ ಗೇಣಿದಾರನು, ಮೂಲ ನಮೂನೆ ಸಂ.7ರಲ್ಲಿ ಕ್ಲೇಮು ಮಾಡಿದ ಆ ಭೂಮಿಯ ನಂತರದ ಹೆಚ್ಚಿನ ವಿಸ್ತೀರ್ಣದಷ್ಟರ ಮಟ್ಟಿಗೆ ಕ್ಲೇಮನ್ನು ಅನುಮತಿಸಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟ ಪ್ರಶ್ನಿತ ಆದೇಶದ ಮೂಲಕ ತಿದ್ದುಪಡಿಯ ಅರ್ಜಿಯನ್ನು ತಿರಸ್ಕರಿಸಿದೆ. ಆದ್ದರಿಂದ, ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಯು ಎತ್ತಲಾದ ವಾದವನ್ನು ಅಂಗೀಕರಿಸಲಾಗದು.

12. ಒಪ್ಪಿತವಾದಂತೆ, 5 ಗುಂಟೆಗಳ ಭೂಮಿಯ ವಿಸ್ತೀರ್ಣದಷ್ಟರ ಮಟ್ಟಿಗೆ ಕ್ಲೇಮು ಮಾಡಿ, ದಿನಾಂಕ 26.8.1978ರಂದು ಪ್ರಸ್ತುತ ಪ್ರಕರಣದಲ್ಲಿ ನಮೂನೆ ಸಂ.7ನ್ನು ದಾಖಲು ಮಾಡಲಾಗಿದೆ. ಮೂಲ ನಮೂನೆ ಸಂ.7ನ್ನು ದಾಖಲು ಮಾಡಲು ನಿಗದಿಪಡಿಸಿದ ದಿನಾಂಕವು, ದಿನಾಂಕ 30.6.1979 ಎಂದು ವಿಧಾನಮಂಡಲದಿಂದ ನಿಗದಿಪಡಿಸಲಾಗಿದೆ ಮತ್ತು ನ್ಯಾಯಾಧಿಕರಣವು ದಿನಾಂಕ 21.09.1981ರಂದು ಗೇಣಿದಾರನ ಕ್ಲೇಮನ್ನು ತಿರಸ್ಕರಿಸಿದೆ ಹಾಗೂ ಈ ನ್ಯಾಯಾಲಯ ರಿಟ್ ಅರ್ಜಿಯನ್ನು ಅಂಗೀಕರಿಸಿದೆ ಮತ್ತು ದಿನಾಂಕ 23.7.2002ರಂದು ಹೊಸದಾಗಿ ಪರಿಗಣನೆಗಾಗಿ ಭೂ ನ್ಯಾಯಾಧಿಕರಣಕ್ಕೆ ವಿಷಯವನ್ನು ವಾಪಸ್ಸು ಕಳುಹಿಸಲಾಗಿದೆ. 5 ಗುಂಟೆಗಳ ಬದಲಾಗಿ 16 ಗುಂಟೆಗಳೆಂದು ವಿಸ್ತೀರ್ಣದ ಜಾಗದಲ್ಲಿ 1978ನೇ ವರ್ಷದಲ್ಲಿ ದಾಖಲು ಮಾಡಿದ ನಮೂನೆ ಸಂಖ್ಯೆ 7ನ್ನು ತಿದ್ದುಪಡಿ ಮಾಡಲು, 25 ವರ್ಷಗಳು ಗತಿಸಿದ ತರುವಾಯ ಸೇರಿಸಲು ದಿನಾಂಕ 22.2.2003ರಂದು ತಿದ್ದುಪಡಿಗಾಗಿ ಪ್ರಸ್ತುತ ಅರ್ಜಿಯನ್ನು ದಾಖಲು ಮಾಡಲಾಗಿದೆ. ಆತನು 5 ಗುಂಟೆಗಳ ಬದಲಿಗೆ 16 ಗುಂಟೆಗಳನ್ನು ಕೃಷಿ ಮಾಡುತ್ತಿದ್ದನೆಂದು ತೋರಿಸುವ ಯಾವುವೇ ಪ್ರಮುಖ ದಸ್ತಾವೇಜುಗಳನ್ನು ಹಾಜರುಪಡಿಸಿರುವುದಿಲ್ಲ. ದಿನಾಂಕ 22.2.2003ರ ವರೆಗೆ ಪ್ರಸ್ತುತ ಅರ್ಜಿಯನ್ನು ಯೋಚಿಸಿದ ತರುವಾಯ ದಾಖಲು ಮಾಡಲಾಗಿದೆ. ಹಾಗಾಗಿ ಇದನ್ನು ಪ್ರೋತ್ಸಾಹಿಸಲಾಗದು. ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮದ 48ಎ(3) ಪ್ರಕರಣವನ್ನು ಈ ಅರ್ಜಿಯ ನಮೂನೆಯೊಂದಿಗೆ ವ್ಯವಹರಿಸುತ್ತದೆ, ನಮೂನೆಯ ನೋಟೀಸುಗಳು, ಪ್ರಕಟಿಸುವ ರೀತಿ ಅಥವಾ ನೋಟೀಸುಗಳ ಜಾರಿ ಮತ್ತು ಅದರೊಂದಿಗೆ ಸಂಬಂಧಿಸಿದ ಇತರೇ ಎಲ್ಲಾ ವಿಷಯಗಳು, ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು. ನ್ಯಾಯಾಧಿಕರಣವು, ಸಿಂಧುವಾದ ಕಾರಣಕ್ಕಾಗಿ, ಈ ಅರ್ಜಿಯ ತಿದ್ದುಪಡಿಗೆ ಗೇಣಿದಾರನಿಗೆ ಅನುಮತಿಸಿದೆ. ವಿಧಾನ ಮಂಡಲವು ಈ ಬಗ್ಗೆ ಅರಿವುಳ್ಳದ್ದಾಗಿದೆ ಮತ್ತು ಈ ಅಧಿನಿಯಮದ 48ಎ(3) ಪ್ರಕರಣದ ಉಪಬಂಧಗಳು ನಮೂನೆ ಸಂ.7ನ್ನು ದಾಖಲು ಮಾಡಲು ವಿಧಾನ ಮಂಡಲದಿಂದ ನಿಗದಿಪಡಿಸಿರುವ ದಿನಾಂಕವನ್ನು ಮೀರಿದ ತರುವಾಯ ಸಹ ತನ್ನ ಮನಸೋ ಇಚ್ಛೆ ಯಾವುದೇ

ಸಮಯದಲ್ಲಿ ಗೇಣಿದಾರನು ಅರ್ಜಿಯನ್ನು ದಾಖಲು ಮಾಡಬಹುದೆಂದು ಅಧಿನಿಯಮದಲ್ಲಿ ಎಲ್ಲಿಯೂ ಹೇಳಲಾಗಿರುವುದಿಲ್ಲ.

13. ಸರ್ವೇ ನಂಬರ್ ಸರಿಪಡಿಸುವಿಕೆ ಅಥವಾ ವಿಸ್ತೀರ್ಣ ಅಥವಾ ಹೊಸ ಸರ್ವೇ ನಂಬರ್ ಸೇರ್ಪಡಿಸುವಿಕೆಗೆ ತಿದ್ದುಪಡಿಗಾಗಿ ಯಾವುದೇ ಅರ್ಜಿಯನ್ನು ದಿನಾಂಕ 30.06.1979ರೊಳಗೆ ದಾಖಲು ಮಾಡಬಹುದು. ಒಪ್ಪಿತವಾದಂತೆ ಪ್ರಸ್ತುತ ಅರ್ಜಿಯನ್ನು ವಿಧಾನ ಮಂಡಲದಿಂದ ನಿರ್ದಿಷ್ಟಪಡಿಸಲಾದ ಕಾಲ ಪರಿಮಿತಿಯನ್ನು ಮೀರಿ ದಿನಾಂಕ 22.2.2003ರಂದು ವಿಸ್ತೀರ್ಣದ ತಿದ್ದುಪಡಿಗಾಗಿ ಸಲ್ಲಿಸಲಾಗಿರುವುದರಿಂದ ಇದು ಊರ್ಜಿತ ಯೋಗ್ಯವಾಗುವುದಿಲ್ಲ.

14. ***ಆರ್. ಕೃಷ್ಣಸ್ವಾಮಿ ರಾವ್ –ವಿರುದ್ಧ– ಲಕ್ಷ್ಮಯ್ಯಶೆಟ್ಟಿ ಮತ್ತು ಇತರರು*** [1] ಪ್ರಕರಣದಲ್ಲಿ ತಿದ್ದುಪಡಿಯ ಅದೇ ವಿವಾದಾಂಶವನ್ನೂ ಪರಿಗಣಿಸುವಾಗ ಈ ನ್ಯಾಯಾಲಯ ಹೊಸ ವಿಸ್ತೀರ್ಣ ಸೇರ್ಪಡೆಗೊಳಿಸುವ ಜಾಗದ ತಿದ್ದುಪಡಿ ಅರ್ಜಿ ಕೋರಿ, ಹೊಸ ಸಮಯಕ್ಕೆ ಸಮನಾಗಿ ಅದೇ ಸರ್ವೇ ನಂಬರ್‌ನಲ್ಲಿದ್ದರೂ ಈ ಮುಂದಿನಂತೆ ಪುರಸ್ಕರಿಸಲಾಗದೆಂದು ಅಭಿಪ್ರಾಯಪಟ್ಟಿರುವುದು ಈ ಮುಂದಿನಂತಿದೆ:

> *"6. ಮೊದಲನೇ ಪ್ರತ್ಯರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಆದಾಗ್ಯೂ, ನ್ಯಾಯಾಧಿಕರಣದ ಮುಂದೆ ಈ ಹಿಂದೆ ಸಲ್ಲಿಸಲಾದ ಅರ್ಜಿಯನ್ನು ಓದಿಕೊಂಡು ಮೊದಲನೇ ಅರ್ಜಿಯನ್ನು, ಈ ಮುಂಚಿನ ಅರ್ಜಿಯು ತಿದ್ದುಪಡಿಗೆ ಮಾತ್ರ ಕೋರಿದ ಮೊದಲನೇ ಪ್ರತ್ಯರ್ಜಿದಾರನು ಏನನ್ನೂ ತೋರಿಸಲಾಗಿದೆಯೆಂಬುದನ್ನು ಸಮರ್ಥಿಸುತ್ತದೆ. ನಾವು ಈ ಹಿನ್ನೆಲೆಯಲ್ಲಿ, ಮೊದಲನೇ ಪ್ರತ್ಯರ್ಜಿದಾರನು, ದಿನಾಂಕ*

1. 1989 (3) ಕೆಎಆರ್ ಎಲ್.ಜೆ.440 ಪ್ಯಾರ 6

*30.6.1979ರ ಮುಕ್ತಾಯದ ಮುಂಚೆ ಮಾತ್ರ ಅರ್ಜಿಯನ್ನು ಹಾಕಲು ಸ್ವಾತಂತ್ರ್ಯವಿದ್ದು, ಅಪೀಲುದಾರನ ಮೇರೆಗೆ ಆ ಭೂಮಿಗಳ ಯಾವುದೇ ಸ್ವತ್ತಿನ ಗೇಣಿದಾರನಾಗಿದ್ದಾನೆಂದು ಕ್ಲೇಮು ಮಾಡಿರುವುದಿಲ್ಲ. ಹಾಗೆ ಮಾಡದಿದ್ದಲ್ಲಿ, ಹೊಸ ಅರ್ಜಿಯನ್ನು ಮೊದಲನೇ ಅರ್ಜಿಯ ತಿದ್ದುಪಡಿಯ ಸ್ವರೂಪದಲ್ಲಿದೆಯೆಂದು ವಾದಿಸಿ ಅಧಿವಿಚಾರಣೆ ಮಾಡಲಾಗುವುದು. ಮೂಲ ನಮೂನೆ ಸಂ.7ರ ತಿದ್ದುಪಡಿಗಾಗಿನ ಅರ್ಜಿಯಲ್ಲಿದ್ದಂತೆ ಸಂಬಂಧಪಡಲಾಗದು. ಈ ಕಾರಣದಿಂದಾಗಿ, ನಾವು ಮೊದಲು ಈ ಮುಂದಿನಂತೆ ರೂಪಿಸಿದ ಪ್ರಶ್ನೆಗೆ ಉತ್ತರಿಸಿದ್ದೇವೆ; ಆ ವ್ಯಕ್ತಿಯು, ನಮೂನೆ ಸಂ.7ರಲ್ಲಿ ಅರ್ಜಿಯನ್ನು ಹಾಕಿರುವುದಿಲ್ಲ ಅಥವಾ ಹೊಸ ಭೂಯಿಯ ಸ್ವತ್ತಿನ ಸಂಬಂಧದಲ್ಲಿ ಅಧಿಬೋಗದ ಹಕ್ಕನ್ನು ಕೋರಿ ಈ ಅಧಿನಿಯಮದ ಪ್ರಕರಣ 48 ಎ(1) ಅಡಿಯಲ್ಲಿ ನಿಗದಿಪಡಿಸಿದ ಅವಧಿಯ ಮುಕ್ತಾಯದ ತರುವಾಯ ತಿದ್ದುಪಡಿಯ ಸ್ವರೂಪದಲ್ಲಿರುವ ಅರ್ಜಿಯನ್ನು ಸಮಯದೊಳಗೆ ದಾಖಲು ಮಾಡಿದ ಅರ್ಜಿಯಲ್ಲಿರುವಂತೆ ಸೇರ್ಪಡೆಗೊಳಿಸಲಾಗದು.*

*ಆದ್ದರಿಂದ, ಶಾಸನದ ಅಡಿಯಲ್ಲಿ ನಿಗದಿಪಡಿಸಲಾದ ಕೊನೆಯ ದಿನಾಂಕದ ಮುಕ್ತಾಯದ ತರುವಾಯದ ತಿದ್ದುಪಡಿಯು ರೀತಿಯಲ್ಲಿ, ಹೊಸ ಕ್ಲೇಮನ್ನೂ ಮಾಡಲಾಗದೆಂಬುದು ಸದರಿ ತೀರ್ಮಾನದ ಅನುಪಾತವಾಗಿದೆ. ತತ್ಪರಿಣಾಮವಾಗಿ, ಹೊಸ ಕ್ಲೇಮಿಗೆ ಸಮನಾಗಿ ಮೊದಲನೇ ಪ್ರತ್ಯರ್ಜಿದಾರನಿಂದ ಕೋರಿದ ತಿದ್ದುಪಡಿಗಾಗಲಿ, ಪರಿಗಣನೆಗಾಗಿ ಉದ್ಭವಿಸುವ ಉದ್ದೇಶವಿದೆಯೇ ಎಂಬುದು ಪ್ರಶ್ನೆಯಾಗಿದೆ".*

15. ***ಚೆನ್ನಪ್ಪಗೌಡ ಮತ್ತು ಇತರರು –ವಿರುದ್ಧ– ಕರ್ನಾಟಕ ಸರ್ಕಾರ ಮತ್ತು ಇತರರು*** [2] ಪ್ರಕರಣದಲ್ಲಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮದ 48–ಎ (3)ರ ಉಪಬಂಧಗಳನ್ನು ಪರಿಗಣಿಸುವಾಗ ಈ ನ್ಯಾಯಾಲಯ, ಈ ಕೆಳಗಿನಂತೆ ಅರ್ಜಿ ಹಾಕುವುದಕ್ಕಾಗಿ ನಿರ್ದಿಷ್ಟಪಡಿಸಲಾದ ಅವಧಿಯ ಮುಕ್ತಾಯದ ತರುವಾಯ ಸಹಾ ಅನುಮತಿಸದೇ ಅಭಿಪ್ರಾಯಪಟ್ಟ ಮೂಲ ಅರ್ಜಿಯಲ್ಲಿರುವಂತೆ ಸೇರ್ಪಡೆಗೊಳಿಸದ ಹೊಸ ಭೂಮಿಯ ಸ್ವತ್ತನ್ನು ಸೇರ್ಪಡೆಗೊಳಿಸಿ ತಿದ್ದುಪಡಿ ಮಾಡಲಾಗಿದೆಯೆಂದು ಅಭಿಪ್ರಾಯಪಟ್ಟಿದೆ.

> *"10. ಒಪ್ಪಲಾಗಿದ್ದು, 48–ಎ(3) ಪ್ರಕರಣದ ಅಡಿಯಲ್ಲಿ ಅರ್ಜಿ ದಾಖಲು ಮಾಡಲು ಸಮಯವನ್ನು ಪ್ರಸ್ತುತ ಪ್ರಕರಣದಲ್ಲಿ, ದಿನಾಂಕ 1.3.1974ರಿಂದ ಮೂಲತಃ 6 ತಿಂಗಳು ತಡವಾಗಿ ತಿದ್ದುಪಡಿಗೆ ಬಂದಿರಬಹುದು ಮತ್ತು 30ನೇ ಜೂನ್, 1979ರ ವರೆಗೆ ವಿಸ್ತರಿಸಲಾಗಿದೆ. ಸರ್ವೇ ನಂಬರ್ ಸರಿಪಡಿಸುವಿಕೆ ಅಥವಾ ವಿಸ್ತೀರ್ಣ ಅಥವಾ ಹೊಸ ಸರ್ವೇ ನಂಬರ್ ಸಹ ಸೇರಿಸುವ ವಿಧಾನದಲ್ಲಾಗಲಿ ಹಾಗೆ ಯಾವುದೇ ತಿದ್ದುಪಡಿ ಅರ್ಜಿಯಂತೆ ದಿನಾಂಕ 30.6.1979ರೊಳಗೆ ದಾಖಲು ಮಾಡಬಹುದು. ಒಪ್ಪಲಾಗಿದ್ದು, ಬಹಿರಂಗಪಡಿಸಿದ ದಾಖಲೆಗಳಂತೆ ಅರ್ಜಿದಾರನಿಂದ ಪ್ರಸ್ತುತ ಅರ್ಜಿಯಂತೆ ದಾಖಲು ಮಾಡಬಹುದು ಮತ್ತು ದಿನಾಂಕ 24.7.1980 ರಂದು ವಿವಾದಿತವಾಗುವುದಿಲ್ಲ. ನಿರ್ದಿಷ್ಟಪಡಿಸಲಾದ ಕಾಲಪರಿಮಿತಿಯನ್ನು ಮೀರಿ ದಾಖಲು ಮಾಡಿದ ತಿದ್ದುಪಡಿ ಅರ್ಜಿ, ತಾನಾಗೀ ಊರ್ಜಿತವಾಗುವುದಿಲ್ಲ. ಈ ಅಂಶಕ್ಕೆ ಸಂಬಂಧಿಸಿದ ಕಾನೂನು ರಿಟ್ ಅಪೀಲು ಸಂ.11237/1982,*

2. 2002(6) ಕೆಎಆರ್ ಎಲ್.ಜೆ. 178

*ಡಿಡಿ 6.1.1984ರಲ್ಲಿ ಈ ನ್ಯಾಯಾಲಯಕ್ಕೆ ಅರ್ಜಿದಾರನು ಬಂದಿರುವಾಗ ಈ ಮುಂಚಿನ ಸಂದರ್ಭದಂದು ಸಂದೇಹವಾಗಿದೆಯೆಂದು ಹೇಳಲಾಗದು. ಆದರೆ ಕಾನೂನಿನಂತೆ ಈ ಅರ್ಜಿಯನ್ನು ಪರಿಗಣಿಸಿದ ಈ ದಿನಾಂಕದಂತೆ, ಈಗ ಸ್ಪಷ್ಟವಾಗಿದ್ದು, ದಿನಾಂಕ 24.7.1980ರಂದು ಅರ್ಜಿದಾರನಿಂದ ದಾಖಲು ಮಾಡಿದ ತಿದ್ದುಪಡಿ ಅರ್ಜಿಯು, ನಿರ್ದಿಷ್ಟಪಡಿಸಲಾದ ಕಾಲ ಪರಿಮಿತಿಯನ್ನು ಮೀರಿದೆ ಮತ್ತು ತಾನಾಗಿಯೇ ನ್ಯಾಯಾಧಿಕರಣದಂತೆ, ಅರ್ಜಿದಾರನ ತಿದ್ದುಪಡಿ ಕ್ಲೇಮನ್ನು ಪರಿಗಣಿಸುವ ಅಧಿಕಾರ ವ್ಯಾಪ್ತಿ ನೀಡಿಲ್ಲವೆಂದು ಅಭಿಪ್ರಾಯಪಡಬಹುದು. ನ್ಯಾಯಾಧಿಕರಣ, ಗಣನೆಗೆ ತೆಗೆದುಕೊಂಡ ಮೇಲೆ ಅರ್ಜಿದಾರನ ಕ್ಲೇಮನ್ನು ತಿರಸ್ಕರಿಸದಿದ್ದರೂ ಸಹ ನಿರ್ದಿಷ್ಟಪಡಿಸಲಾದ ಕಾಲಪರಿಮಿತಿಯೊಳಗೆ ದಾಖಲು ಮಾಡಿದ ಅರ್ಜಿಗಳ ಮೇಲೆ ಅವಲಂಬಿಸಿದ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ ನನ್ನ ದೃಷ್ಟಿಯಿಂದ, ತಿದ್ದುಪಡಿ ಅರ್ಜಿಯು ಊರ್ಜಿತವಾಗದೇ ಹಾಗೆ ಘೋಷಣೆ ಪಡೆದುಕೊಳ್ಳಲು ನ್ಯಾಯಾಧಿಕರಣಕ್ಕೆ ಉಳಿದಿರುವ ಈ ಪ್ರಕರಣವನ್ನು ನ್ಯಾಯಸಮ್ಮತದ ದಾರಿ ಮೂಲಕ ಜಾರಿ ಮಾಡುವ ಉದ್ದೇಶ ಹೊಂದಿರುವುದಿಲ್ಲ. ಮೇಲೆ ಹೇಳಲಾದ ಕೆ.ಎ.ಸುಬ್ಬಾರಾವ್ ಪ್ರಕರಣದಲ್ಲಿ ಉಚ್ಚರಿಸಿದ ವಿಭಾಗೀಯ ಪೀಠದ ಹಿನ್ನೆಲೆಯಲ್ಲಿ, ನನ್ನ ಅಭಿಪ್ರಾಯದಲ್ಲಿ, ಈ ಅರ್ಜಿಯು, ಗುಣಾವಗುಣಗಳು ಇಲ್ಲದೇ ಇರುವುದರಿಂದ ಮತ್ತು ನಿರ್ದಿಷ್ಟಪಡಿಸಲಾದ ಕಾಲ ಪರಿಮಿತಿಯನ್ನು ಮೀರಿ ದಾಖಲು ಮಾಡಿದ ತಿದ್ದುಪಡಿ ಅರ್ಜಿಯ ಕಾರಣದ ಮೇಲೆ ಮಾತ್ರ ತಿರಸ್ಕರಿಸಬಹುದು ಮತ್ತು ಹಾಗೇ*

*ನ್ಯಾಯಾಧಿಕರಣವು, ಅರ್ಜಿದಾರನ ಕ್ಲೇಮನ್ನು ತೀರ್ಮಾನಿಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ.*

16. ಪ್ರಸ್ತುತ ಮೊಕದ್ದಮೆಯಲ್ಲಿ ಮೇಲೆ ಹೇಳಿದ ಒಪ್ಪಿತ ಸಂಗತಿಗಳ ದೃಷ್ಟಿಯಿಂದ ಮತ್ತು ಮೇಲೆ ಹೇಳಲಾದ ಈ ನ್ಯಾಯಾಲಯದ ಸೂಕ್ತಿಗಳ ದೃಷ್ಟಿಯಿಂದ, ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಿ ಅಸಾಧಾರಣ ರಿಟ್ ಅಧಿಕಾರ ವ್ಯಾಪ್ತಿ ಅಡಿಯಲ್ಲಿ ಭೂ ನ್ಯಾಯಾಧಿಕರಣ ಮಾಡಿದ ಪ್ರಶ್ನಿತ ಆದೇಶದೊಂದಿಗೆ ಹಸ್ತಕ್ಷೇಪ ಮಾಡಲು ಯಾವುದೇ ಕಾರಣವನ್ನು ಅರ್ಜಿದಾರರು ಒದಗಿಸಿರುವುದಿಲ್ಲ.

ಅದಕ್ಕನುಸಾರವಾಗಿ, ಈ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.

---